# ಕರ್ನಾಟಕ ವಿಧಾನ ಪರಿಷತ್ತು

## 141ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1231

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 30-09-2020

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಮೊತ್ತದ ಬಿಲ್ಲುಗಳು ಗುತ್ತಿಗೆದಾರರಿಗೆ ಪಾವತಿಯಾಗಲು ಬಾಕಿ ಇವೆ (ಜಿಲ್ಲಾವಾರು ಮತ್ತು ಯಾವ ವರ್ಷದ ಬಿಲ್ಲುಗಳು ಪಾವತಿಸಲು ಬಾಕಿ ಇವೆ ಎಂಬುದರ ಕುರಿತು ವರ್ಷವಾರು ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆಯಡಿ ಗುತ್ತಿಗೆದಾರರಿಗೆ ಪಾವತಿಯಾಗಲು ಬಾಕಿ ಇರುವ ಮೊತ್ತದ ಜಿಲ್ಲಾವಾರು, ವರ್ಷವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ) | ಕಳೆದ ಎರಡು ವರ್ಷಗಳಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಬಿಡುಗಡೆಗೊಂಡ ಮೊತ್ತವೆಷ್ಟು? ಯಾವ ಗುತ್ತಿಗೆದಾರರಿಗೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ (ತಿಂಗಳವಾರು, ಜಿಲ್ಲಾವಾರು ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆಯಲ್ಲಿ 2018-19 ಹಾಗೂ 2019-20ನೇ ಸಾಲಿನಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಸರ್ಕಾರದಿಂದ ಬಿಡುಗಡೆ ಮಾಡಿದ ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ. |
| ಇ) | ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸಿದ ಎಷ್ಟು ಸಮಯದ ಬಳಿಕ ಗುತ್ತಿಗೆದಾರರಿಗೆ ಬಾಕಿ ಮೊತ್ತದ ಬಿಲ್ಲುಗಳ ಪಾವತಿಯಾಗುತ್ತಿದೆ? ಸರ್ಕಾರದಿಂದ ವಿಳಂಬ ಪಾವತಿಗೆ ಬಡ್ಡಿ ನೀಡಲಾಗುತ್ತಿದೆಯೇ? ಇದುವರೆಗೆ ಎಷ್ಟು ಗುತ್ತಿಗೆದಾರರಿಗೆ ಬಡ್ಡಿ ಪಾವತಿಸಲಾಗಿದೆ. | ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಗಳ ಬಿಲ್ಲುಗಳನ್ನಾಧರಿಸಿ, ಸರ್ಕಾರಕ್ಕೆ ಹಣ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದ್ದು, ಸರ್ಕಾರದಿಂದ ಕಾಲ ಕಾಲಕ್ಕೆ ಬಿಡುಗಡೆಯಾಗುವ ಹಣವನ್ನು ಬಿಲ್ಲುಗಳ ಜೇಷ್ಠತೆಯನ್ನಾಧರಿಸಿ ಪಾವತಿಸುವ ಕ್ರಮ ಜಾರಿಯಲ್ಲಿರುತ್ತದೆ. ಕಾರಣ, ಬಾಕಿ ಬಿಲ್ಲುಗಳಿಗೆ ಬಡ್ಡಿ ಪಾವತಿಸುವ ಪ್ರಮೇಯವು ಉದ್ಭವಿಸುವುದಿಲ್ಲ. |
| ಈ) | ಗುತ್ತಿಗೆದಾರರಿಗೆ ಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರವು ಯಾವ ರೀತಿಯ ನಿಯಮಗಳನ್ನು ಅನುಸರಿಸುತ್ತದೆ. ಸಮರ್ಪಕ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆಯೇ? (ಮಾರ್ಗಸೂಚಿಯ ಪ್ರತಿ ಒದಗಿಸುವುದು) | ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಗಳ ಬಾಕಿ ಬಿಲ್ಲಿನ ಮೊತ್ತವನ್ನು ಪಾವತಿಸಲು ರೂಪಿಸಿದ ನಿಯಮಗಳ ವಿವರಗಳನ್ನು ಅನುಬಂಧ-3 ರಲ್ಲಿ ತಯಾರಿಸಿ ಸಲ್ಲಿಸಲಾಗಿದೆ. |

ಲೋಇ/648/ಐಎಫ್ಎ/2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪಮುಖ್ಯಮಂತ್ರಿಗಳು
ಹಾಗೂ ಲೋಕೋಪಯೋಗಿ ಸಚಿವರು